**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 3898/2024**

| | | |
|---|---|---|
| **ಹೆಸರು** | :- | **ಗುರುಮೂರ್ತಿ** |
| **ತಂದೆಯ ಹೆಸರು** | :- | **ಈಶ್ವರಪ್ಪ** |
| **ವಯಸ್ಸು** | :- | **35 ವರ್ಷ** |
| **ಉದ್ಯೋಗ** | :- | **ಅಬಕಾರಿ ಉಪನೀರಿಕ್ಷಕರು** |
| **ಸ್ಥಳ** | :- | **ತೀರ್ಥಹಳ್ಳಿ** |

**ದಿನಾಂಕಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿಃ 05.02.2024 ರಿಂದ 23.11.2025 ರವರೆಗೆ ಸಾಗರ ಅಬಕಾರಿ ವಲಯದಲ್ಲಿ ಅಬಕಾರಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24.04.2024 ರಂದು ಚಾಸಾ-1 ರವರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ಹೊರಟು ಸೊರಬ ವಲಯ ವ್ಯಾಪ್ತಿಯ ಮಾಗಡಿ ಗ್ರಾಮಕ್ಕೆ ಸಂಜೆ 4.00 ಗಂಟೆ ಬಂದು ಮಾಗಡಿ ಗ್ರಾಮದ ಬಸ್ ನಿಲ್ದಾಣದ ಬಳಿ ಗಸ್ತು ನಿರ್ವಹಿಸುತ್ತಿದ್ದಾಗ ಆರೋಪಿಯು ತನ್ನ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿಯು ಚಾಸಾ-1 ರವರಿಗೆ ಬಂದಿದ್ದು, ಸದರಿ ವಿಷಯವನ್ನು ನನಗೆ ತಿಳಿಸಿ ಪಂಚರರನ್ನು ಕರೆತರಲು ಸೂಚಿಸಿರುತ್ತಾರೆ. ಅಲ್ಲಿ ಬಸ್ ನಿಲ್ದಾಣದ ಬಳಿ ಇದ್ದ

ಇಬ್ಬರು ವ್ಯಕ್ತಿಗಳನ್ನು ಪರಿಚಯಿಸಿಕೊಂಡು ಅವರ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಅವರು ಚಾಸಾ–3 ಮತ್ತು 4 ರವರು ಆಗಿರುತ್ತಾರೆ. ಅವರು ಪಂಚರಾಗಲು ಒಪ್ಪಿದ್ದರಿಂದ ಅವರಿಗೆ ಚಾಸಾ–1 ರವರು ನೋಟಿಸ್ ಜಾರಿ ಮಾಡಿರುತ್ತಾರೆ. ಸಾಕ್ಷಿಯು ಪಂಚರಿಗೆ ನೀಡಿದ ನೋಟಿಸಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಈಗಾಗಲೇ ನಿಪಿ–1 ಮತ್ತು 2 ಎಂದು ಗುರುತಿಸಲ್ಪಟ್ಟಿರುತ್ತವೆ. ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಕರೆದುಕೊಂಡು ಮಾಹಿತಿ ಇದ್ದ ಮನೆಯ ಮುಂಭಾಗದ ಟಾರ್ ರಸ್ತೆಯಲ್ಲಿ ನಿಲ್ಲಿಸಿ, ಮಾಹಿತಿ ಇದ್ದ ಅಂಗಡಿಯ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಅಂಗಡಿಯೊಳಗೆ ಒಬ್ಬ ಆಸಾಮಿ ಇದ್ದು, ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನು ಆರೋಪಿಯಾಗಿರುತ್ತಾನೆ. ಆತನು ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾನೆ. ನಂತರ ಚಾಸಾ–1 ರವರು ತಮಗೆ ಬಂದ ಮಾಹಿತಿಯನ್ನು ಆರೋಪಿಗೆ ತಿಳಿಸಿದಾಗ ಮತ್ತು ಸದರಿ ಅಂಗಡಿ ಮನೆಯನ್ನು ಶೋಧಿಸಬೇಕಾಗಿ ತಿಳಿಸಿದಾಗ ಆತನು ಶೋಧಿಸಲು ಒಪ್ಪಿಗೆ ನೀಡಿದ್ದರಿಂದ ಮಾನ್ಯ ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ ಆಧಾರವನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ ಅಬಕಾರಿ ಕಾಯ್ದೆ ಕಲಂ 54 ಅಡಿಯಲ್ಲಿ ಶೋಧನಾ ಸಮುಚ್ಚಿತ ಆಧಾರವನ್ನು ಚಾಸಾ–1 ರವರು ತಯಾರಿಸಿಕೊಂಡಿರುತ್ತಾರೆ. ಸಾಕ್ಷಿಯು ಶೋಧನಾ ಸಮುಚ್ಚಿತ ಆಧಾರವನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–3 ಎಂದು ಗುರುತಿಸಲ್ಪಟ್ಟಿರುತ್ತದೆ. ನಂತರ ಚಾಸಾ–1 ರವರು ನನ್ನ, ಚಾಸಾ–3 ಮತ್ತು 4 ರವರ ಸಮಕ್ಷಮ ಆರೋಪಿಗೆ ಸೇರಿದ ಸಿದ್ದಿ

ವಿನಾಯಕ ಜನರಲ್ ಸ್ಟೋರ್ ಅನ್ನು ಸಂಜೆ 4.30ರ ಸಮಯದಲ್ಲಿ ಶೋಧಿಸಲಾಗಿ ಅಂಗಡಿಯ ಪೂರ್ವ ದಿಕ್ಕಿನ ಮೂಲೆಯಲ್ಲಿ ಒಂದು ಬಿಳಿ ಚೀಲ ಕಂಡುಬಂದಿದ್ದು, ಅದನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಮತ್ತು ಬಿಯರ್ ನ ಟಿನ್ ಗಳು ಕಂಡು ಬಂದಿದ್ದು, ಅವುಗಳನ್ನು ಪರಿಶೀಲಿಸಿ ನೋಡಲಾಗಿ 90 ಮಿಲಿಯ ಕ್ಯಾಪ್ಟನ್ ಮಾರ್ಟಿನ್ 30 ಟೆಟ್ರಾ ಪ್ಯಾಕೇಟ್ ಗಳು ಮತ್ತು 500 ಎಂ.ಎಲ್. ಪವರ್ ಫುಲ್ ಸ್ಟ್ರಾಂಗ್ ಬಿಯರ್ ನ 14 ಟಿನ್ ಗಳು ಮತ್ತು 500 ಎಂ.ಎಲ್. ಲೆಜೆಂಡ್ ಸ್ಟ್ರಾಂಗ್ ಬಿಯರ್ ನ 16 ಟಿನ್ ಗಳು ಮತ್ತು ಯು.ಬಿ. ಎಕ್ಸಪರ್ಟ್ ನ 12 ಟಿನ್ ಗಳು ಕಂಡುಬಂದಿರುತ್ತವೆ. ಸದರಿ ಮದ್ಯದ ಮೇಲೆ ಇರು ಅಡಿಸ್ಯೂ ಲೇಬಲ್ ನ್ನು ಪರಿಶೀಲಿಸಿ ನೋಡಿ, ಅದನ್ನು ಅನುಬಂಧ-1 ರಲ್ಲಿ ನಮೂದಿಸಿರುತ್ತಾರೆ. ಸಾಕ್ಷಿಯು ಅನುಬಂಧ-1ನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-4 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4ಬಿ ಎಂದು ಗುರುತಿಸಲಾಯಿತು. ದೊರೆತ ಎಲ್ಲಾ ಮುದ್ದೆ ಮಾಲುಗಳನ್ನು ಅದೇ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಇಲಾಖಾ ಮೊಹರಿನಿಂದ ಸೀಲು ಮಾಡಿರುತ್ತಾರೆ. ನಂತರ ಮಾದರಿ ಮೊಹರಿನ ಚೀಟಿಯನ್ನು ಮತ್ತು ಸ್ವತ್ತು ಪಟ್ಟಿಯನ್ನು ತಯಾರಿಸಿ ಪಂಚರ ಸಹಿ ಪಡೆದು ಮುದ್ದೆ ಮಾಲಿಗೆ ಅಂಟಿಸಿರುತ್ತಾರೆ. ಸದರಿ ಸ್ಥಳದಲ್ಲಿ ಸಂಜೆ 4.30 ರಿಂದ 5.30 ರವರೆಗೆ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಒಟ್ಟಾಗಿ ಎಂ.ಓ-1 ಎಂದು ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿಯು

ಮಾದರಿ ಮೊಹರನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–5 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ–5 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತು ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–6 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ–6 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–7 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ–7 ಬಿ ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ–10 ಎಂದು ಗುರುತಿಸಲ್ಪಟ್ಟಿರುತ್ತದೆ. ಆ ದಿನ ಆರೋಪಿಯನ್ನು ಘಟನಾ ಸ್ಥಳದಲ್ಲಿ ನೋಡಿದ್ದು, ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ. ನಾನು ದಾಳಿಯಲ್ಲಿ ಭಾಗವಹಿಸಿದ ಬಗ್ಗೆ ಚಾಸಾ–8 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ.ವಿ.ಕೆ. ವಕೀಲರಿಂದಃ**

ಆ ದಿನ ನಮ್ಮ ಇಲಾಖೆಯಿಂದ 3.30 ಕ್ಕೆ ಹೊರಟಿರುತ್ತೇವೆ. ನಮ್ಮ ಕಛೇರಿಯಿಂದ ಘಟನಾ ಸ್ಥಳಕ್ಕೆ ಹೋಗಲು ಸುಮಾರು 20 ನಿಮಿಷ ಬೇಕಾಗುತ್ತದೆ. ಘಟನಾ ಸ್ಥಳದಲ್ಲಿ ಜರುಗಿಸಿದ ಪಂಚನಾಮೆ ಕಾಲಕ್ಕೆ ನಾನು ಹಾಜರಿರಲಿಲ್ಲ ಅಂದರೆ ಸರಿಯಲ್ಲ. ನಾವು 4.00 ಗಂಟೆಗೆ ಮಾಗಡಿ ಗ್ರಾಮದ ಬಸ್ ನಿಲ್ದಾಣದ ಬಳಿ ಗಸ್ತು ನಿರ್ವಹಿಸುತ್ತಿದ್ದೆವು. ಸಾಗರದಿಂದ ಮಾಗಡಿ ಗ್ರಾಮಕ್ಕೆ ಬರಲು 20–30 ನಿಮಿಷ ಬೇಕಾಗುತ್ತದೆ. ನಾನು ಹೇಳುವಂತೆ ಘಟನಾ ಸ್ಥಳಕ್ಕೆ 4.30 ಕ್ಕೆ ದಾಳಿ ಮಾಡಿರುತ್ತೇವೆ

ಅಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ದಾಳಿ ನಡೆಸಿರುವುದಿಲ್ಲ, ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ದಾಳಿಯಲ್ಲಿ ಭಾಗವಹಿಸದೇ ಮೇಲಾಧಿಕಾರಿಯವರ ಮುಲಾಜಿಗೆ ಒಳಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿಯು ಯಾವುದೇ ಗುನ್ನೆ ಮಾಡಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**